11-4-21

# ಇಂದಿನಿಂದ ನಾಲ್ಕು ದಿನ ಲಸಿಕಾ ಉತ್ಸವ

## ಕೊರೋನಾ ವಿರುದ್ಧ ಹೋರಾಟಕ್ಕೆ ಪಣ । ಮೋದಿ ಕರೆ ನೀಡಿದಂತೆ ಉತ್ಸವಕ್ಕೆ ಸಿದ್ಧತೆ । ಹೆಚ್ಚು ಜನರಿಗೆ ಲಸಿಕೆ ಕೊಡಿಸಲು ನಿರ್ಧಾರ

ನವದೆಹಲಿ: ಕೊರೋನಾ ಸೋಂಕಿನ ವಿರುದ್ಧ ಹೋರಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿರುವ 'ಲಸಿಕಾ ಉತ್ಸವ' ಭಾನುವಾರದಿಂದ ಬುಧವಾರದವರೆಗೆ ದೇಶಾದ್ಯಂತ ನಡೆಯಲಿದೆ.

'ಲಸಿಕಾಕರಣ ತೀವ್ರಗೊಳಿಸಿ ಕೊರೋನಾ ನಿರ್ಮೂಲನೆ ಮಾಡಬೇಕು. ಏಪ್ರಿಲ್ 11ರಿಂದ 14ರವರೆಗೆ 4 ದಿನ 'ಲಸಿಕಾ ಉತ್ಸವ'ವನ್ನು ದೇಶದಲ್ಲಿ ಆಚರಿಸಬೇಕು. ಲಸಿಕೆ ಪಡೆಯಲು ಅರ್ಹರಾಗಿರುವ 45 ವರ್ಷ ಮೇಲ್ಪಟ್ಟ ಜನರನ್ನು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕಾ ಕೇಂದ್ರಗಳಿಗೆ ಕರೆತಂದು ಚುಚ್ಚುಮದ್ದು ಕೊಡಿಸಬೇಕು' ಎಂದು ಇತ್ತೀಚೆಗೆ ಮುಖ್ಯಮಂತ್ರಿಗಳ ಸಭೆಯಲ್ಲಿ ಮನವಿ ಮಾಡಿದ್ದ ಮೋದಿ ಮನವಿ ಮಾಡಿದ್ದರು.

ಇದಕ್ಕೆ ಓಗೊಟ್ಟಿರುವ ರಾಜ್ಯಗಳು ಅಂದು ಲಸಿಕಾ ಉತ್ಸವಕ್ಕೆ ಸಿದ್ಧತೆ ಆರಂಭಿಸಿವೆ. ಆಂಧ್ರಪ್ರದೇಶ ಹಾಗೂ ಉತ್ತರಪ್ರದೇಶದಲ್ಲಿ 4 ದಿನದ ಅವಧಿಯಲ್ಲಿ ತಲಾ 25 ಲಕ್ಷ ಜನರಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ. ಇದೇ ವೇಳೆ, ಉತ್ತರ ಪ್ರದೇಶದಲ್ಲಿ ಲಸಿಕಾ ಕೇಂದ್ರಗಳನ್ನು 6 ಸಾವಿರದಿಂದ 8 ಸಾವಿರಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ.

ಆದರೂ, ಹಲವು ರಾಜ್ಯಗಳು ಲಸಿಕೆ ಕೊರತೆ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸಿವೆ. ಹೀಗಾಗಿ ಲಸಿಕಾ ಉತ್ಸವದ ಯಶಸ್ಸಿಗೆ ಕೇಂದ್ರ ಸರ್ಕಾರ ಎಷ್ಟರ ಮಟ್ಟಿಗೆ ಲಸಿಕೆ ಪೂರೈಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಕ.ಪ್ರ 11.4.21

# ಲಸಿಕೆ ವೇಗದಲ್ಲಿ ಭಾರತ ನಂ.1

## 85 ದಿನದಲ್ಲಿ 10 ಕೋಟಿ ಡೋಸ್ । ಅಮೆರಿಕ, ಚೀನಾ ಹಿಂದಿಕ್ಕಿದ ಭಾರತ

ನವದೆಹಲಿ: ಕೊರೋನಾ ಲಸಿಕೆ ನೀಡಿಕೆಯಲ್ಲಿ ಭಾರತ ಶನಿವಾರ ಮೈಲಿಗಲ್ಲು ಸ್ಥಾಪಿಸಿದೆ. ಲಸಿಕಾ ಅಭಿಯಾನ ಆರಂಭದ 85 ದಿನದೊಳಗೆ 10 ಕೋಟಿ ಲಸಿಕೆಯನ್ನು ಭಾರತದಲ್ಲಿ ನೀಡಲಾಗಿದ್ದು, ಇಷ್ಟು ವೇಗದಲ್ಲಿ 10 ಕೋಟಿ ಲಸಿಕೆ ನೀಡಿದ ಮೊದಲ ದೇಶ ಎನ್ನಿಸಿಕೊಂಡಿದೆ. 10 ಕೋಟಿ ಲಸಿಕೆ ನೀಡಲು ಅಮೆರಿಕ 89 ದಿನ ತೆಗೆದುಕೊಂಡಿತ್ತು ಹಾಗೂ ವಿಶ್ವಕ್ಕೇ ಕೊರೋನಾ ಹಬ್ಬಿಸಿದ ಅಪಖ್ಯಾತಿಗೆ ಒಳಗಾಗಿರುವ ಚೀನಾ 102 ದಿನಗಳನ್ನು ತೆಗೆದುಕೊಂಡಿತ್ತು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. 10 ಕೋಟಿ ಡೋಸ್‌ಗಳಲ್ಲಿ ಶೇ.60ರಷ್ಟು ಪಾಲನ್ನು ಕರ್ನಾಟಕ ಸೇರಿದಂತೆ 8 ರಾಜ್ಯಗಳು ಪಡೆದಿವೆ.

85 ದಿನದ ಲೆಕ್ಕಾಚಾರ ಗಮನಿಸಿದರೆ ಅಮೆರಿಕದಲ್ಲಿ 9.2 ಕೋಟಿ, ಚೀನಾ ಹಾಗೂ ಬ್ರಿಟನ್‌ನಲ್ಲಿ ಕ್ರಮವಾಗಿ 6.1 ಕೋಟಿ ಹಾಗೂ 2.1 ಕೋಟಿ ಡೋಸ್ ನೀಡಲಾಗಿತ್ತು. ಇದೇ ವೇಳೆ ದೈನಂದಿನ ಲಸಿಕೆ ನೀಡಿಕೆಯಲ್ಲೂ ಭಾರತ ಮೊದಲ ಸ್ಥಾನಿಯಾಗಿದ್ದು, ಸರಾಸರಿ 38,93,288 ಡೋಸ್‌ಗಳನ್ನು ನೀಡಲಾಗುತ್ತದೆ.



[illegible]

| ದೇಶ | ದಿನ | ಪ್ರಮಾಣ |
|---|---|---|
| ಭಾರತ | 85 | 10 ಕೋಟಿ |
| ಅಮೆರಿಕ | 89 | 10 ಕೋಟಿ |
| ಚೀನಾ | 102 | 10 ಕೋಟಿ |

ಈ ಮೈಲಿಗಲ್ಲು ಮುಟ್ಟಿದ ವೇಗದ ದೇಶ ಎಂಬ ಖ್ಯಾತಿ ಭಾರತದ್ದಾಗಿದೆ. ಕೋವಿಡ್‌ಮುಕ್ತ ದೇಶ ಸ್ಥಾಪನೆಗೆ ಇದು ಬಲ ನೀಡಲಿದೆ

• ಪ್ರಧಾನಿ ಸಚಿವಾಲಯ

# ಮಾಸ್ಕ್ ಇಲ್ಲದಿದ್ದರೆ ರ‍್ಯಾಲಿಗಳಿಂದಲೇ ಅಭ್ಯರ್ಥಿಗೆ ನಿಷೇಧ

## ಸ್ಟಾರ್ ಪ್ರಚಾರಕರಿಗೂ ಅನ್ವಯ: ಆಯೋಗ ಕೊರೋನಾ 2ನೇ ಅಲೆಯ ಹಿನ್ನೆಲೆ ಎಚ್ಚರಿಕೆ

ನವದೆಹಲಿ: ದೇಶಾದ್ಯಂತ ಕೊರೋನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿ ಗಳನ್ನು ಉಲ್ಲಂಘಿಸುವ ಅಭ್ಯರ್ಥಿಗಳು ಹಾಗೂ ಸ್ಟಾರ್ ಪ್ರಚಾರಕರನ್ನು ಪ್ರಚಾರ ರ‍್ಯಾಲಿಗಳಿಂದಲೇ ನಿಷೇಧಿಸುವು ದಾಗಿ ಚುನಾವಣಾ ಆಯೋಗ ಎಚ್ಚರಿಕೆ ನೀಡಿದೆ.

[illegible]

| ರಾಜ್ಯ | ಸೋಂಕು | ಸಾವು |
|---|---|---|
| ಮಹಾರಾಷ್ಟ್ರ | 55411 | 309 |
| ಛತ್ತೀಸ್‌ಗಢ | 14098 | 97 |
| ಉ. ಪ್ರದೇಶ | 12740 | 46 |
| ದೆಹಲಿ | 7897 | 39 |
| ಕರ್ನಾಟಕ | 6955 | 36 |

★(ಏ.10ರ ಏಕದಿನದ ಕೇಸುಗಳು)

ನಾಲ್ಕು ದಿನಗಳ ಹಿಂದಷ್ಟೇ ಮೂರು ರಾಜ್ಯಗಳ ಚುನಾವಣೆ ಮುಕ್ತಾಯವಾಗಿದ್ದು, ಅಲ್ಲಿ ನಿಯಮ ಮಿತಿ ಮೀರಿ ಉಲ್ಲಂಘನೆಯಾದ ವರದಿಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಆಯೋಗ ಈ ಎಚ್ಚರಿಕೆಯನ್ನು ನೀಡಿದೆ. ಪಶ್ಚಿಮ ಬಂಗಾಳದಲ್ಲಿ 4 ಹಂತದ ಚುನಾವಣೆಗಳು ಮುಗಿದಿದ್ದು, ಇನ್ನೂ 4 ಹಂತ ಬಾಕಿ ಇವೆ.

ಚುನಾವಣಾ ಸಭೆ/ಪ್ರಚಾರ ವೇಳೆ ಸಾಮಾಜಿಕ ಅಂತರ, ಮಾಸ್ಕ್ ಧರಿಸುವಿಕೆಯಂತಹ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡುತ್ತಿರುವುದು ಆಯೋಗದ ಗಮನಕ್ಕೆ ಬಂದಿದೆ. ಸ್ಟಾರ್ ಪ್ರಚಾರಕರು/ರಾಜಕೀಯ ನಾಯಕರು/ಅಭ್ಯರ್ಥಿಗಳು ವೇದಿಕೆ, ಪ್ರಚಾರ ಸಂದರ್ಭದಲ್ಲಿ ಮಾಸ್ಕ್ ಧರಿಸುತ್ತಿಲ್ಲ. ಇಂತಹ ಉಲ್ಲಂಘನೆ ಮುಂದುವರಿದರೆ ನಾಯಕರನ್ನು ಯಾವುದೇ ಸೂಚನೆ ಇಲ್ಲದೆ ಅಂತಹ ಸಭೆಗಳಿಂದ ನಿಷೇಧಿಸಬೇಕಾಗುತ್ತದೆ ಎಂದು ಆಯೋಗ ಎಚ್ಚರಿಕೆ ನೀಡಿದೆ.

# 1.45 ಲಕ್ಷ ಮಂದಿಗೆ ಸೋಂಕು, 794 ಜನರ ಸಾವು

- ಸಾರ್ವಕಾಲಿಕ ಗರಿಷ್ಠ ಸೋಂಕು
- ಸಕ್ರಿಯ ಸೋಂಕಿತರು 10.46 ಲಕ್ಷ
- 794 ಮಂದಿಗೆ ಕೋವಿಡ್‌ಗೆ ಬಲಿ
- ಅಕ್ಟೋಬರ್ ಬಳಿಕದ ಗರಿಷ್ಠ ಸಾವು

ನವದೆಹಲಿ: ದೇಶದಲ್ಲಿ ಸತತ 5ನೇ ದಿನವೂ 1 ಲಕ್ಷಕ್ಕಿಂತ ಹೆಚ್ಚಿನ ಕೊರೋನಾ ಸೋಂಕಿನ ಪ್ರಕರಣಗಳು ದಾಖಲಾಗಿವೆ. ಶನಿವಾರ ಬೆಳಗ್ಗೆ 8ಕ್ಕೆ ಮುಕ್ತಾಯಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 1.45 ಲಕ್ಷ ಜನರಲ್ಲಿ ಸೋಂಕು ದೃಢಪಟ್ಟಿದೆ. ಜೊತೆಗೆ 794 ಜನರು ವೈರಸ್‌ಗೆ ಬಲಿಯಾಗಿದ್ದಾರೆ. ಒಂದೇ ದಿನದಲ್ಲಿ ಇಷ್ಟೊಂದು ಜನರಿಗೆ ಸೋಂಕು ತಗುಲಿದ ದಾಖಲೆ ಇದಾಗಿದ್ದರೆ, ಸಾವಿನ ಪ್ರಮಾಣವು ಅ. 18ರ ಬಳಿಕದ ಗರಿಷ್ಠವಾಗಿದೆ.

# ಮಹಾ ಲಾಕ್ಡೌನ್: ಇಂದು ಘೋಷಣೆ?

ಮುಂಬೈ: ಕಳೆದ ಕಲ ದಿನಗಳಿಂದ ದೈನಂದಿನ 50 ಸಾವಿರಕ್ಕಿಂತ ಹೆಚ್ಚು ಮಂದಿಗೆ ವ್ಯಾಪಿಸುತ್ತಿರುವ ಕೊರೋನಾದ 2ನೇ ಅಲೆಯ ತಡೆಗಾಗಿ ಮಹಾರಾಷ್ಟ್ರದಾದ್ಯಂತ ಕಠಿಣ ಲಾಕ್‌ಡೌನ್ ಜಾರಿ ಮಾಡುವ ಬಗ್ಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಗಂಭೀರ ಚಿಂತನೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಈ ಸಂಬಂಧ ಶನಿವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಸೋಂಕು ನಿಯಂತ್ರಣಕ್ಕೆ ಲಾಕ್ಡೌನ್ ಹೊರತಾಗಿ ಅನ್ಯ ಮಾರ್ಗಗಳಿಲ್ಲ ಎಂದು ಸಿಎಂ ಠಾಕ್ರೆ ಸ್ಪಷ್ಟಪಡಿಸಿದ್ದಾರೆ. ಆದರೆ ಈ ಬಗ್ಗೆ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗಿಲ್ಲ. ಹೀಗಾಗಿ ಭಾನುವಾರದ ಕೊರೋನಾ ಕಾರ್ಯಪಡೆ ಸಭೆಯಲ್ಲಿ ಲಾಕ್‌ಡೌನ್ ಜಾರಿ ಬಗ್ಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಸಚಿವ ನವಾಬ್ ಮಲಿಕ್ ಅವರು ಹೇಳಿದ್ದಾರೆ.

## ಜಪಾನ್ ಮೀರಿಸಿದ ಮುಂಬೈ

ಮುಂಬೈ: ಶುಕ್ರವಾರ 9202 ಕೊರೋನಾ ಪ್ರಕರಣಗಳು ಪತ್ತೆಯಾಗಿರುವ ಮುಂಬೈನಲ್ಲಿ ಒಟ್ಟು ಸೋಂಕಿತರ ಸಂಖ್ಯೆ 5 ಲಕ್ಷ ದಾಟಿದೆ. ತನ್ಮೂಲಕ ಒಟ್ಟಾರೆ ಸೋಂಕಿತರ ವಿಷಯದಲ್ಲಿ ಜಪಾನ್ ಮತ್ತು ಅರಬ್ ಸಂಯುಕ್ತ ಸಂಸ್ಥಾನ ರಾಷ್ಟ್ರವನ್ನು ಮುಂಬೈ ಮೀರಿಸಿದಂತಾಗಿದೆ. ಜಪಾನ್‌ನಲ್ಲಿ ಒಟ್ಟು ಸೋಂಕಿತರ ಸಂಖ್ಯೆ 4.96 ಲಕ್ಷದಷ್ಟಿದ್ದರೆ, ಅರಬ್‌ನಲ್ಲಿ 4.80 ಲಕ್ಷ ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ.

23